# ಸಂವರ್ಗ

ಆಧುನಿಕ ಸಮಾಜವು ಪ್ರತಿಯೊಂದನ್ನು ಬಿಡಿಬಿಡಿಯಾಗಿ ನೋಡುತ್ತಿದೆ. ನಮ್ಮ ಆಲೋಚನೆ ಮತ್ತು ನಡಾವಳಿಗಳು ಕೂಡ ಇದಕ್ಕೆ ಪೂರಕವಾಗಿಯೇ ಸ್ಪಂದಿಸುತ್ತಿವೆ. ಆದರೆ, ಜಗತ್ತಿನ ಚಿಂತಕರು 'ಒಳಗೊಳ್ಳುವ' ಕ್ರಿಯೆಯ ಬಗೆಗೆ ಈಗೀಗ ಹೆಚ್ಚು ಯೋಚಿಸುತ್ತಿದ್ದಾರೆ. ಒಳಗೊಳ್ಳುವಿಕೆಯು ಇಂದಿನ ಅಗತ್ಯವೆಂದು ಸಮಾಜವಿಜ್ಞಾನಿಗಳೂ ತತ್ವಚಿಂತಕರೂ ಸಾರುತ್ತಿದ್ದಾರೆ. ಇಂಗ್ಲಿಷಿನಲ್ಲಿ 'ಇನ್‌ಕ್ಲೂಸಿವ್' ಎಂಬ ಪರಿಕಲ್ಪನೆಯೊಂದು ಉಂಟಷ್ಟೆ. ಇದು ಸಮಾಜ ವಿಜ್ಞಾನಿಗಳು ರೂಪಿಸಿದ ಪರಿಕಲ್ಪನೆ. ಆಶ್ಚರ್ಯದ ಸಂಗತಿ ಎಂದರೆ ಈ ಪರಿಕಲ್ಪನೆಗೆ ಸಮಾನವಾದ ಭಾರತೀಯ ತಾತ್ವಿಕ ಪರಿಕಲ್ಪನೆಯೊಂದು ಉಪನಿಷತ್ತಿನಲ್ಲಿ ಉಂಟು. ಛಾಂದೋಗ್ಯೋಪನಿಷತ್ತಿನ ನಾಲ್ಕನೆಯ ಅಧ್ಯಾಯದಲ್ಲಿ 'ಸಂವರ್ಗವಿದ್ಯೆ'ಯನ್ನು ಹೇಳಲಾಗಿದೆ. ವಾಯುದೇವತೆಯ ರೂಪವಾದ ಬ್ರಹ್ಮದ ಉಪಾಸನೆಯ ಸ್ತುತಿಗಾಗಿ, ಜಾನುಶ್ರುತಿಯು ರೈಕ್ವನಿಂದ ಪಡೆದ ಉಪದೇಶವೇ ಈ ಸಂವರ್ಗವಿದ್ಯೆ. ಜಾನುಶ್ರುತಿಯು ಉಪನಿಷತ್ತಿನ ಕಾಲದಲ್ಲಿದ್ದ ಒಬ್ಬ ರಾಜ. ಇವನು ಪ್ರಜೆಗಳ ಕಲ್ಯಾಣಕ್ಕಾಗಿ ಉತ್ತಮ ಕಾರ್ಯಗಳನ್ನು ಮಾಡುತ್ತಿದ್ದ. ಈತ ಜನಪರ ಕೆಲಸಗಳನ್ನು ಮಾಡಿ ಪ್ರಜೆಗಳ ಪ್ರೀತಿಗೂ ಪಾತ್ರನಾಗಿದ್ದ. ಇವನು ಪ್ರಜೆಗಳಿಂದ ಅತ್ಯಂತ ಕಡಿಮೆ ತೆರಿಗೆಯನ್ನು ಪಡೆದು ದೇಶೋದ್ಧಾರದ ಅನೇಕ ಕಾರ್ಯಗಳನ್ನು ಮಾಡುತ್ತಿದ್ದ.

ಹೀಗಾಗಿ, ಅವನು ಆದರ್ಶರಾಜನೆಂದು ಪ್ರಸಿದ್ಧಿ ಪಡೆದಿದ್ದ. ಆ ರಾಜ್ಯದ ಜನರು ಜಾನುಶ್ರುತಿಯನ್ನು ಹೊಗಳುತ್ತಿದ್ದರು. ಒಂದು ದಿನ ರಾಜ ಉಪ್ಪರಿಗೆಯ ಮೇಲೆ ಕುಳಿತು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ. ಆಗ ಅಲ್ಲಿಗೆ ಬಂದ ಎರಡು ಹಂಸಗಳು ಪರಸ್ಪರ ಮಾತನಾಡಿಕೊಳ್ಳುತ್ತಿದ್ದವು.

'ಈ ಜಾನುಶ್ರುತಿಯು ರೈಕ್ವನಷ್ಟು ಮಹಾತ್ಮನಲ್ಲ. ಇವನು ದಾನಧರ್ಮಗಳನ್ನು ಮಾಡುತ್ತಾನೇನೋ ನಿಜ. ಆದರೆ, ಇವನ ಕೆಲಸಗಳು ಕೇವಲ ಪ್ರಾಪಂಚಿಕ ಮಟ್ಟದಲ್ಲಿವೆ. ಆದರೆ, ರೈಕ್ವನು ಬ್ರಹ್ಮಜ್ಞಾನಿ. ಇವರಿಬ್ಬರನ್ನು ಹೋಲಿಸುವುದಕ್ಕೆ ಸಾಧ್ಯವಿಲ್ಲ.' ಹೀಗೆಂದು ಮಾತನಾಡಿಕೊಳ್ಳುತ್ತಿದ್ದವು.

ಜಾನುಶ್ರುತಿಯು ಹಂಸಗಳ ಮಾತನ್ನು ಕೇಳಿಸಿಕೊಂಡ. ಅಂತಹ ಮಹಾತ್ಮನಿಂದ ವಿದ್ಯೆಯನ್ನು ಪಡೆಯಬೇಕೆಂದು ಮನಸ್ಸುಮಾಡಿಕೊಂಡ. ಅವನು ಮರುದಿನ ಸೇವಕನನ್ನು ಕರೆದು 'ರೈಕ್ವನೆಂಬ ಬ್ರಹ್ಮಜ್ಞಾನಿ ಎಲ್ಲಿದ್ದಾನೆ? ತಿಳಿದುಕೊಂಡು ಬಾ' ಎಂದು ಆಜ್ಞಾಪಿಸಿದ. ಕೊನೆಗೆ ನಿರ್ಜನವಾದ ಪ್ರದೇಶದಲ್ಲಿ ಗಾಡಿಯ ಹತ್ತಿರ ಕುಳಿತಿರುವ ಮೈಯನ್ನು ಕೆರೆದುಕೊಳ್ಳುತ್ತಿರುವ ಮನುಷ್ಯನ ಸಮೀಪಕ್ಕೆ ಬಂದು 'ತಾವು ಸಯುಗ್ವರೈಕ್ವ ನೀವೇ ಏನು?' ಎಂದು ಪ್ರಶ್ನಿಸಿದ. ಆಗ ರೈಕ್ವ ಅನಾದರದಿಂದ 'ಹೌದು ನಾನೇ ಅವನು' ಎಂದು ಉತ್ತರಿಸಿದ. ಸೇವಕನು ಈ ವಿಷಯವನ್ನು ಜಾನುಶ್ರುತಿಗೆ ತಿಳಿಸಿದ. ಅನಂತರ ಜಾನುಶ್ರುತಿಯು ರೈಕ್ವನ ಬಳಿಗೆ ಬಂದು ಸಂವರ್ಗವಿದ್ಯೆಯನ್ನು ಬೇಡಿ ಪಡೆದುಕೊಂಡ.

'ಸಂವರ್ಗ' ಎಂದರೆ ಎಲ್ಲವನ್ನು ತನ್ನೊಳಗೆ ತೆಗೆದುಕೊಳ್ಳುವ ಕ್ರಿಯೆಯೆಂದು ಅರ್ಥ. ಇದು ಆಧುನಿಕರು ಹೇಳುವ 'ಒಳಗೊಳ್ಳುವಿಕೆ' ಎಂಬ ಮಾತಿಗೆ ಸಮಾನವಾದ ಪರಿಕಲ್ಪನೆ. ವಾಯು ಮತ್ತು ಪ್ರಾಣ ಇವೆರಡನ್ನು ಸಂವರ್ಗವೆಂದು ರೈಕ್ವನು ಜಾನುಶ್ರುತಿಗೆ ತಿಳಿಸುತ್ತಾನೆ. ಉಪನಿಷತ್ತಿನ ಮಾತು ಹೀಗುಂಟು: 'ವಾಯುರ್ವಾವ ಸಂವರ್ಗೋ ಯದಾ ವಾ ಅಗ್ನಿರುದ್ವಾಯತಿ ವಾಯುಮೇವಾಪ್ಯೇತಿ, ಯದಾ ಸೂರ್ಯೋಸ್ತಮೇತಿ ವಾಯುಮೇವಾಪ್ಯೇತಿ, ಯದಾ ಚಂದ್ರೋಸ್ತಮೇತಿ ವಾಯುಮೇವಾಪ್ಯೇತಿ' ವಾಯುವು ಸಂವರ್ಗ ಗುಣದಿಂದ ಕೂಡಿದೆ. ಯಾವಾಗ ಅಗ್ನಿಯು ಆರಿಹೋಗುವುದೊ ಆಗ ಅವನು ವಾಯುವಿನಲ್ಲಿ ಲೀನವಾಗುತ್ತಾನೆ. ಸೂರ್ಯಚಂದ್ರರು ವಾಯುವಿನಲ್ಲಿ ಸೇರಿಕೊಳ್ಳುತ್ತಾರೆ. ಎಲ್ಲವನ್ನು ತನ್ನೊಳಗೆ ಸೆಳೆದುಕೊಳ್ಳುವ ಗುಣ ವಾಯುವಿನದಾಗಿದೆ. ಇದು ಉಪನಿಷತ್ತಿನ ಅರ್ಥ. ನಮ್ಮ ಶರೀರದಲ್ಲಿ ಹಾಗೂ ಮುಖ್ಯಪ್ರಾಣನಲ್ಲಿ ಎಲ್ಲ ದೇವತೆಗಳು ಲೀನಗೊಂಡಿದ್ದರೆ ಮುಖ್ಯಪ್ರಾಣನು ಮಾತ್ರ ತನ್ನ ಕೆಲಸವನ್ನು ಸದಾ ಮಾಡುತ್ತಿರುತ್ತಾನೆ. ಅವನು ತನ್ನ ಕ್ರಿಯೆಯನ್ನು ನಿಲ್ಲಿಸಿದರೆ, ಮಾನವ ಶರೀರ ಸತ್ತಂತೆಯೇ ಸರಿ. ಆದ್ದರಿಂದ ಮುಖ್ಯಪ್ರಾಣನೆನಿಸಿರುವ ವಾಯುವೇ ಆ ಸಂವರ್ಗ ದೇವತೆ.

ಈ ಸಂವರ್ಗವಿದ್ಯೆಯ ಮಹತ್ವವನ್ನು ತಿಳಿಸುವ ಸಲುವಾಗಿ ರೈಕ್ವನು ಜಾನುಶ್ರುತಿಗೆ ಒಂದು ಕಥೆಯನ್ನು ಹೇಳುತ್ತಾನೆ. ಒಮ್ಮೆ ಇಬ್ಬರು ಋಷಿಗಳು ಊಟ ಮಾಡುತ್ತಿರುವಾಗ ಬ್ರಹ್ಮಚಾರಿಯೊಬ್ಬ ಬಂದು ಭಿಕ್ಷೆಯನ್ನು ಕೇಳುತ್ತಾನೆ. ಆದರೆ, ಅವರು ಏನನ್ನೂ ಕೊಡುವುದಿಲ್ಲ. ಆಗ ಆ ಬ್ರಹ್ಮಚಾರಿಯು ಅವರಿಗೆ 'ಒಬ್ಬನೇ ದೇವನಲ್ಲಿ ನಾಲ್ವರು ಮಹಾತ್ಮರು ಇದ್ದಾರೆ. ಅವರೇ ಅಗ್ನಿ, ಸೂರ್ಯ, ಚಂದ್ರ ಮತ್ತು ಆಪ. ಆ ಮುಖ್ಯಪ್ರಾಣನು ಸರ್ವಲೋಕಗಳ ರಕ್ಷಕ. ಸಾಮಾನ್ಯ ಮನುಷ್ಯರು ಅವನನ್ನು ನೋಡಲಾರರು. ಯಾವನಿಗೆ ಈ ಅನ್ನ ಸೇರಬೇಕೋ ಅವನಿಗೆ ನೀವು ಅನ್ನವನ್ನು ಏಕೆ ಕೊಡಲಿಲ್ಲ?' ಎಂದು ಕೇಳಿದ. ಆಗ ಆ ಋಷಿಗಳು ಇವನ ಮಾತನ್ನು ಕೇಳಿ ಅವನ ಬ್ರಹ್ಮಜ್ಞಾನವನ್ನು ತಿಳಿದು ಆನಂದಪಟ್ಟರು. ಒಂದರೊಡನೊಂದು ಸೇರಿಕೊಳ್ಳುವ ಕ್ರಿಯೆಯು 'ಸಂವರ್ಗ' ಎನಿಸುತ್ತದೆ. ಇದು ಆಧುನಿಕರು ಹೇಳುವ 'ಇನ್‌ಕ್ಲೂಸಿವ್' ಎಂಬ ಮಾತಿಗೆ ಸಂವಾದಿಯಾಗಿದೆ.

■ ಪುರಂಜೀವಿ

## ಮಾತೇ ಮುತ್ತು

◆ ನಾವು ಅನುಸರಿಸಬೇಕಾಗಿರುವುದು ಸಂತರ ಚಾರಿತ್ರ್ಯವನ್ನೇ ಹೊರತು ಚರಿತ್ರೆಯನ್ನಲ್ಲ.
—ವಿನೋಬಾ ಭಾವೆ

◆ ಭಿನ್ನಮತದ ಮನ್ನಣೆಯೇ ಪ್ರಜಾಪ್ರಭುತ್ವದ ಪ್ರಾಣವಾಯು.
—ಗೋಪಾಲಕೃಷ್ಣ ಅಡಿಗ

◆ ಬುದ್ಧಿಯ ಸಂಸ್ಕೃತಿಯು ಹೃದಯ ಸಂಸ್ಕೃತಿಯ ಅಡಿಯಾಳಾಗಿರಬೇಕು.
—ಗಾಂಧೀಜಿ

◆ ಬೇರೆಯವರ ಗಟ್ಟಿದನಿಗಳು ನಿಮ್ಮ ಒಳದನಿಯನ್ನು ಅಡಗಿಸಲು ಬಿಡಬೇಡಿ.
—ಬಿಲ್‌ಗೇಟ್ಸ್

◆ ಇನ್ನೊಬ್ಬರ ಹುಚ್ಚುತನ ನಮಗೆ ಕಾಣಿಸುವಷ್ಟು ಸುಲಭವಾಗಿ ನಮ್ಮ ಹುಚ್ಚುತನ ನಮಗೆ ಕಾಣಿಸದು.
—ಶಿವರಾಮ ಕಾರಂತ

◆ ಪ್ರಜಾಪ್ರಭುತ್ವ ಒಳ್ಳೆಯದು. ನಾನು ಏಕೆ ಹೀಗೆ ಹೇಳುತ್ತೇನೆಂದರೆ, ಇತರ ಪದ್ಧತಿಗಳು ಇನ್ನೂ ಕೆಟ್ಟವು.
—ಜವಾಹರಲಾಲ್ ನೆಹರು

◆ ಮನುಷ್ಯ ಅಮರ— ಏಕೆಂದರೆ ಇತರ ಪ್ರಾಣಿಗಳಲ್ಲಿ ಇಲ್ಲದ ಆತ್ಮ, ಕನಿಕರ, ಸ್ವಾರ್ಥ, ತ್ಯಾಗ, ತಾಳ್ಮೆ ಅವನಲ್ಲಿರುತ್ತದೆ.
—ವಿಲಿಯಂ ಫಾಕ್ನರ್

◆ ಸಜ್ಜನರ ನಡುವೆ ದುಃಖದ ಬಾಗಿಲುಗಳು ತಾವಾಗಿಯೇ ತೆರೆದುಕೊಳ್ಳುತ್ತವೆ.
—ಕಾಳಿದಾಸ

◆ ಯುದ್ಧ ಕೆಟ್ಟವನನ್ನು ನಾಶ ಮಾಡುವುದಿಲ್ಲ, ಒಳ್ಳೆಯವನನ್ನು ಸದಾ ನಾಶ ಮಾಡುತ್ತದೆ.
—ಸಾಫೋಕ್ಲಿಸ್

◆ ಹೂವಿಗೆ ಸುವಾಸನೆ ಇದ್ದಂತೆ, ಮನುಷ್ಯನಿಗೆ ವ್ಯಕ್ತಿತ್ವ.
—ಪಿ. ಸೈರಸ್

◆ ಪ್ರಪಂಚದಲ್ಲಿ ಇರುವುದು ಎರಡೇ ಜಾತಿ, ಶ್ರೀಮಂತರು ಮತ್ತು ಬಡವರು.
—ಸರ್. ವಾಂಟೀಸ್